**DECEMBER 06, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ** ಯೋಜನೆ; 2 ಲಕ್ಷ ತಂತ್ರಜ್ಞರಿಗೆ ಶೀಘ್ರ ತರಬೇತಿ.
- **ಮಣ್ಣಿನ ಆರೋಗ್ಯ ರಕ್ಷಣೆಗೆ,** ಕೃಷಿ ಇಲಾಖೆಯಿಂದ, ಭೂ ಸಂಪನ್ಮೂಲ ಸಮೀಕ್ಷೆ.
- **ಸಾರ್ವಜನಿಕರ ಆರೋಗ್ಯ ಕಾಪಾಡಲು,** ಆಹಾರ ಇಲಾಖೆಯಿಂದ, ಆಹಾರ ಪದಾರ್ಥಗಳ ನಿಯಮಿತ ಪರೀಕ್ಷೆ.
- **ಭಾರತ ರತ್ನ, ಬಾಬಾಸಾಹೇಬ ಅಂಬೇಡ್ಕರ** ಅವರ, 69ನೇ ಪುಣ್ಯತಿಥಿ ಇಂದು; ದೇಶಾದ್ಯಂತ ಮಹಾ ಪರಿನಿರ್ವಾಣ ದಿನದ ಸ್ಮರಣೆ.

<><><>

**ಈಗ ವಾರ್ತೆಗಳ ವಿವರ**

<><><>

**ಸೌರ ವಿದ್ಯುತ್ ಫಲಕಗಳನ್ನು,** ಮನೆ ಮೇಲ್ಛಾವಣಿ ಮೇಲೆ ಅಳವಡಿಸಿ, ಉಚಿತ ವಿದ್ಯುತ್ ಪಡೆಯಲು, ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆ ಜಾರಿಗೊಳಿಸಲಾಗಿದೆ ಎಂದು, ವಿಜಯನಗರ ಜಿಲ್ಲೆ, ಹೊಸಪೇಟೆಯ ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಜಾನ್ ವೆಸ್ಲಿ ಹೇಳಿದ್ದಾರೆ. ಜನ ಜಾಗ್ರತಿ ಯಾತ್ರಾಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ಒಂದು ಕಿಲೋವ್ಯಾಟ್‌ಗೆ 30 ಸಾವಿರ ರೂಪಾಯಿ, 2 ಕಿಲೋ ವ್ಯಾಟ್‌ಗೆ 60 ಸಾವಿರ ರೂಪಾಯಿ ಮತ್ತು 3 ಕಿಲೋ ವ್ಯಾಟ್‌ಗೆ 78 ಸಾವಿರ ರೂಪಾಯಿ, ಸಹಾಯ ಧನ ನೀಡಲಾಗುತ್ತದೆ.

ಸಾಕಾಗುವ ್ಟ ವಿದ್ಯುತ್ ಬಳಸಿಕೊಂಡು, ಬಾಕಿ ವಿದ್ಯುತ್‌ನ್ನು ತಮ್ಮ ಇಲಾಖೆಗೆ ಮಾರಾಟ ಮಾಡಲು ಅವಕಾಶವಿದೆ ಎಂದರು.

<><><>

**ಕೇಂದ್ರದ ಸೂರ್ಯ ಘರ್ ಯೋಜನೆ** ಬಗ್ಗೆ, ಉಡುಪಿ ಜಿಲ್ಲಾಡಳಿತ ಕಚೇರಿಯ, ರಜತಾದ್ರಿಯ ಅಟಲ್ ಸಭಾಂಗಣದಲ್ಲಿ, ನಾಳೆ ಬೆಳಗ್ಗ 10.30ಕ್ಕೆ ಕಾರ್ಯಾಗಾರ ನಡೆಯಲಿದೆ ಎಂದು, ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

<><><>

**ಕೇಂದ್ರ ಸರ್ಕಾರ** ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ ಅಡಿ, 2 ಲಕ್ಷ ತಂತ್ರಜ್ಞರಿಗೆ ತರಬೇತಿ ನೀಡಲಿದೆ.

<><><>

**ರೈತರ ಜೀವಾಳವಾದ,** ಮಣ್ಣಿನ ಆರೋಗ್ಯ ಕಾಪಾಡಲು, ಭೂ ಸಂಪನ್ಮೂಲ ಸಮೀಕ್ಷೆ ಮುಖ್ಯವಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನ ಕೃಷಿ ಆಯುಕ್ತಾಲಯದಲ್ಲಿ, ವಿಶ್ವ, ಮಣ್ಣಿನ ಆರೋಗ್ಯ ದಿನಾಚರಣೆಗೆ, ಅವರು ಚಾಲನೆ ನೀಡಿ, ಮಾತನಾಡಿದರು. ಪ್ರತಿಯೊಂದು ಕೃಷಿ ಭೂಮಿಯ ಮಾಹಿತಿ, ಡಿಜಿಟಲ್ ಸ್ವರೂಪದಲ್ಲಿ ರೈತರಿಗೆ ಸಿಗಬೇಕು ಎನ್ನುವ ಆಶಯ ಹೊಂದಲಾಗಿದೆ. ಹಲವು ಕಾರಣಗಳಿಂದ ಅವನತಿಯತ್ತ ಸಾಗುತ್ತಿರುವ ಮಣ್ಣನ್ನು, ಕೃಷಿ ಯೋಗ್ಯ ಮಾಡಲು, ಇಲಾಖೆ ನೆರವಾಗಲಿದೆ ಎಂದರು.

<><><>

**ಕಾರ್ಯಕ್ರಮದಲ್ಲಿ ಪಾಲ್ಗೊಂಡು,** ಪ್ರಾತ್ಯಕ್ಷಿಕೆ ನೀಡಿದ, ಮಣ್ಣಿನ ಹೆಸರಾಂತ ತಜ್ಞ, ಬೆಂಗಳೂರಿನ ಇಮ್ಮಡಿಹಳ್ಳಿಯ ಸಾಯಿಲ್ ವಾಸು, ಪಿ. ಶ್ರೀನಿವಾಸ ಅವರು, ಮಣ್ಣಿನ ಆರೋಗ್ಯ ಕಾಪಾಡುವ ಅನಿವಾರ್ಯತೆ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಸಾಯಿಲ್ ವಾಸು ಧ್ವನಿ 40 ಸೆಕೆಂದುಗಳು**

<><><>

**ಧಾರವಾಡ ಕೃಷಿ ವಿಶ್ವವಿದ್ಯಾಲಯದ,** ಮಣ್ಣು ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕ, ರಾಜಕುಮಾರ ಜಿ.ಆರ್. ಅವರು, ಪ್ರದೇಶ ಸಮಾಚಾರಕ್ಕಾಗಿ, ಮಣ್ಣಿನಲ್ಲಿ ಸಾವಯವ ಇಂಗಾಲದ ಮಹತ್ವ ಕುರಿತು, ತಿಳಿಸಿದ್ದಾರೆ.

<><><>

**ರಾಜಕುಮಾರ ಜಿ.ಆರ್. ಧ್ವನಿ 40 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ,** ನಿತ್ಯ ಸೇವಿಸುವ ಆಹಾರ ಪದಾರ್ಥಗಳನ್ನು, ನಿಯಮಿತವಾಗಿ ಪರೀಕ್ಷಿಸುವಂತೆ, ಆಹಾರ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಬೆಂಗಳೂರಿನ ರಾಜ್ಯ ಆಹಾರ ಪ್ರಯೋಗಾಲಯಕ್ಕೆ ಭೇಟಿ ನೀಡಿ, ಆಹಾರ ಸುರಕ್ಷತಾ ಗುಣಮಟ್ಟ ಪರೀಕ್ಷಿಸುವ ವಿಧಾನವನ್ನು ಅವರು ಪರಿಶೀಲಿಸಿದರು. ಕಾಟನ್ ಕ್ಯಾಂಡಿ, ಗೋಬಿ ಮಂಚೂರಿ ಸೇರಿದಂತೆ ಇನ್ನಿತರ ಆಹಾರ ಪದಾರ್ಥಗಳಲ್ಲಿ ಕಲುಷಿತ, ವಿ ´ಕಾರಿ ಅಥವಾ ಇನ್ನಿತರ ಯಾವುದೇ ರಾಸಾಯನಿಕ, ಬಣ್ಣಗಳು ಬೆರೆತಿರುವುದು ಕಂಡು ಬಂದಲ್ಲಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಅವರು ಪ್ರಕಟಿಸಿದ್ದಾರೆ.

<><><>

**ಭಾರತ ರತ್ನ, ಬಾಬಾಸಾಹೇಬ ಅಂಬೇಡ್ಕರ** ಅವರ, 69ನೇ ಪುಣ್ಯತಿಥಿ ಇಂದು. ಮಹಾ ಪರಿನಿರ್ವಾಣ ದಿನವಾಗಿ, ಶ್ರದ್ಧೆಯಿಂದ ದೇಶಾದ್ಯಂತ ಸ್ಮರಿಸಲಾಗುತ್ತಿದೆ. ಸಂವಿಧಾನಶಿಲ್ಪಿ ಬಾಬಾಸಾಹೇಬ ಅಂಬೇಡ್ಕರ ಅವರ ಮಹಾ ಪರಿನಿರ್ವಾಣ ದಿನದ ಹಿನ್ನೆಲೆ, ಬೆಳಗ್ಗೆ 9.30ಕ್ಕೆ ಧಾರವಾಡದ ಆಲೂರ ವೆಂಕಟರಾವ್ ವೃತ್ತದ ಬಳಿಯ, ಪುತ್ಥಳಿಗೆ ಗಣ್ಯರು ಮಾಲಾರ್ಪಣೆ ಮಾಡಿ, ಗೌರವಾರ್ಪಿಸಲಿದ್ದಾರೆ.

<><><>

**ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಲ್ಲಿ** ಇಂದು, ಮಹಾ ಪರಿನಿರ್ವಾಣ ದಿನವನ್ನು ಆಚರಿಸಿ, ಬಾಬಾಸಾಹೇಬರಿಗೆ ಶ್ರದ್ಧಾ ಸುಮನ ಅರ್ಪಿಸಲಾಗುತ್ತಿದೆ.

<><><>

**ಬೆಂಗಳೂರಿನ ವಿಧಾನಸೌಧದ** ಮುಂಭಾಗದಲ್ಲಿರುವ, ಭಾರತ ರತ್ನ ಬಾಬಾಸಾಹೇಬ ಅಂಬೇಡ್ಕರ ಅವರ ಪುತ್ಥಳಿಗೆ, ಇಂದು ಬೆಳಗ್ಗೆ 10 ಗಂಟೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಖಾತೆ ಸಚಿವ ಎಚ್.ಸಿ. ಮಹಾದೇವಪ್ಪ ಸೇರಿದಂತೆ, ಗಣ್ಯರು ಪುಷ್ಪಾರ್ಚನೆ ಮಾಡಲಿದ್ದಾರೆ.

<><><>

**ಹೊಸ ದಿಲ್ಲಿಯ ಸಂಸತ್ ಭವನದ** ಆವರಣದಲ್ಲಿರುವ, ಪ್ರೇರಣಾ ಸ್ಥಳದಲ್ಲಿ, ಬೆಳಗ್ಗೆ 9.30 ರಿಂದ ಮಧ್ಯಾಹ್ನ 12 ಗಂಟೆಯ ವರೆಗೆ, ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಅವರ ಸ್ಮರಣೋತ್ಸವ ಆಯೋಜಿತವಾಗಿದೆ. ಶ್ರೀಸಾಮಾನ್ಯರೂ ಸಹ ಪಾಲ್ಗೊಂಡು, ಗೌರವಾರ್ಪಿಸಲು ಅವಕಾಶ ಕಲ್ಪಿಸಲಾಗಿದೆ.

<><><>

**ಹಾವೇರಿ ಜಿಲ್ಲೆ ಶಿಗ್ಗಾಂವ ತಾಲೂಕು** ಶಿಶುವಿನಹಾಳದಲ್ಲಿ, ಅಂಚೆ ಇಲಾಖೆ, ಭಾವೈಕ್ಯದ ಹರಿಕಾರರಾದ ಸಂತ ಶರೀಫರು ಹಾಗೂ ಗುರು ಗೋವಿಂದ ಭಟ್ಟರ, ಶಾಶ್ವತ ಚಿತ್ರಾತ್ಮಕ ರದ್ದತಿ

ಮುದ್ರೆ ಬಿಡುಗಡೆ ಗೊಳಿಸಿದೆ. ಅಂಚೆ ಅಧೀಕ್ಷಕ ಬಿ. ನಾರಾಯಣ ಮಾತನಾಡಿ, ‘ನಾಡಿನ ಹೆಮ್ಮೆಯ ಭಾವೈಕ್ಯದ ಹರಿಕಾರರ ಇತಿಹಾಸ, ಈ ಶಾಶ್ವತ ಚಿತ್ರಾತ್ಮಕ ಮುದ್ರೆಯಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಪಡೆಯಲಿದೆ. ಶಾಶ್ವತ ಚಿತ್ರಾತ್ಮಕ ರದ್ದತಿ ಮುದ್ರೆಯನ್ನು, ಆಸಕ್ತ ಅಂಚೆ ಚೀಟಿ ಸಂಗ್ರಹಕಾರರು, ಮೊಹರಾಗಿ ಹಾಕಿಸಿಕೊಳ್ಳಬಹುದು ಎಂದರು.

<><><>

**21ನೇ ರಾಷ್ಟ್ರೀಯ ಜಾನುವಾರು ಗಣತಿ ಸಮೀಕ್ಷೆಗೆ,** ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಕೆ.ಎಚ್.ಮುನಿಯಪ್ಪ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಚಾಲನೆ ನೀಡಿದರು. ಜಾನುವಾರು ಗಣತಿಯಿಂದ, ಹೈನುಗಾರಿಕೆ ಹಾಗೂ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ವರದಿ ಆಧರಿಸಿ, ಪಶು ಸಂಗೋಪನೆ, ಮೇವಿನ ಲಭ್ಯತೆ, ಆರೋಗ್ಯ, ಔ ‘ಧೋಪಚಾರ, ಉತ್ಪಾದಕತೆ ಹೆಚ್ಚಳ ಮುಂತಾದ ಯೋಜನೆಗಳನ್ನು ರೂಪಿಸಲು, ಸಹಕಾರಿಯಾಗಲಿದೆ ಎಂದರು.

<><><>

**ಬೆಂಗಳೂರಿನ ಡೆಫೋಡಿಲ್ಸ್ ಆಂಗ್ಲ ಮಾಧ್ಯಮ ಶಾಲೆ ಮಕ್ಕಳು,** “ವಾತ್ಸಲ್ಯ ಆನಂದ; ಬದುಕಿ ಮತ್ತು ಬದುಕಲು ಬಿಡಿ” ಆಂದೋಲನದಿಂದ ಸಂಗ್ರಹಿಸಿದ, 3 ಲಕ್ಷದ 15 ಸಾವಿರ ರೂಪಾಯಿಗಳನ್ನು, ಬನ್ನೇರುಘಟ್ಟ ಜೈವಿಕ ಉದ್ಯಾನದ ವಿವಿಧ ಪ್ರಾಣಿಗಳ ದತ್ತು ಸ್ವೀಕಾರ, ಪಾಲನೆ ಮತ್ತು ಪೋಷಣೆಗೆ, ನೀಡಿ, ಮಾದರಿಯಾಗಿದ್ದಾರೆ. ಅಳಿವಿನಂಚಿನಲ್ಲಿರುವ ಹಿಮಾಲಯದ ಕಪ್ಪು ಕರಡಿ ಮತ್ತು ಘರಿಯಾಲ್ ಮೊಸಳೆಗಳು ಹಾಗೂ ಮುಳ್ಳುಹಂದಿಗಳನ್ನು, ಮಕ್ಕಳು ದತ್ತು ಪಡೆದಿದ್ದಾರೆ. ಜೈವಿಕ ಉದ್ಯಾನವನದ ಪಶು ವೈದ್ಯಾಧಿಕಾರಿ ಡಾಕ್ಟರ್ ಆನಂದ, ಮಕ್ಕಳನ್ನು ಅಭಿನಂದಿಸಿದ್ದಾರೆ.

<><><>

**ಬೆಂಗಳೂರಿನ ಜವಹರಲಾಲ್ ನೆಹರು ತಾರಾಲಯ,** ಇಂದಿನಿಂದ 8ನೇ ತಾರೀಖಿನ ವರೆಗೆ, “ಸೈನ್ಸ್ ಇನ್ ಆಕ್ಷನ್” ಪ್ರದರ್ಶಿನಿಯನ್ನು, ಬೆಳಗ್ಗೆ 10:30 ರಿಂದ ಸಂಜೆ 4:30 ರ ವರೆಗೆ ಆಯೋಜಿಸಿದೆ. ವಿವಿಧ ಪ್ರೌಢ ಶಾಲೆಗಳಿಂದ ಆಯ್ದ, 25 ಅತ್ಯುತ್ತಮ ಪ್ರಾಯೋಗಿಕ ಮಾದರಿಗಳಾದ, ವಿದ್ಯುತ್ ವಿಭಜನೆ, ವಿಸ್ಕಸ್ ಫಿಂಗರಿಂಗ್, ಭೂ ಕಂಪನ ಮತ್ತು ಅನುರಣನ, ಸಂವಹನ ಕೋಶಗಳನ್ನು, ಮಕ್ಕಳು ಪ್ರದರ್ಶಿಸಲಿದ್ದಾರೆ. ಬೆಂಗಳೂರಿನ ವಿಶ್ವೇಶ್ವರಾಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯದ ನಿರ್ದೇಶಕ ಕೆ.ಸಾಜೂ ಭಾಸ್ಕರನ್, ಇಂದು ಬೆಳಗ್ಗೆ 9.30ಕ್ಕೆ ಪ್ರದರ್ಶಿನಿ ಉದ್ಘಾಟಿಸಲಿದ್ದಾರೆ.

<><><>

**“ವಡ್ಡರ್ಸೆ ರಘುರಾಮ ಶೆಟ್ಟಿ ಸಾಮಾಜಿಕ** ನ್ಯಾಯ ಪತ್ರಿಕೋದ್ಯಮ’ ಪ್ರಶಸ್ತಿಗೆ, ಹೆಸರಾಂತ, ಹಿರಿಯ ಪತ್ರಕರ್ತ, ಹೊಸ ದಿಲ್ಲಿಯ ಡಿ.ಉಮಾಪತಿ ಆಯ್ಕೆಯಾಗಿದ್ದಾರೆ ಎಂದು, ವಾರ್ತಾ ಇಲಾಖೆ ಆಯುಕ್ತ ಹೇಮಂತ ನಿಂಬಾಳ್ಕರ್ ತಿಳಿಸಿದ್ದಾರೆ. ನ್ಯಾಯಮೂರ್ತಿ ಅಶೋಕ ಹಿಂಚಿಗೇರಿ ಅಧ್ಯಕ್ಷತೆಯ ಸಮಿತಿ, ಆಯ್ಕೆ ಮಾಡಿದ್ದು, ಪ್ರಶಸ್ತಿ 2 ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

<><><>

**'ಕ್ಷಯ ಮುಕ್ತ ಭಾರತ'** ನಿಕ್ಷಯ್ ಪೋಷಣ್ ಅಭಿಯಾನದಡಿ, ವಯಸ್ಕರಿಗೆ ಬಿ.ಸಿ.ಜಿ. ಲಸಿಕೆ ನೀಡುವ ಕಾರ್ಯಕ್ರಮಕ್ಕೆ, ವಿಜಯಪುರ ಸೇರಿದಂತೆ, ರಾಜ್ಯದ 6 ಜಿಲ್ಲೆಗಳಲ್ಲಿ ಚಾಲನೆ ನೀಡಲಾಗಿದೆ.

<><><>

**ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ** ನೇಮಕಕ್ಕೆ, ನಾಳೆ ಹಾಗೂ ನಾಡಿದ್ದು, ರಾಜ್ಯಾದ್ಯಂತ ಪರೀಕ್ಷೆಗಳು ನಡೆಯಲಿವೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ** ಯೋಜನೆ; 2 ಲಕ್ಷ ತಂತ್ರಜ್ಞರಿಗೆ ಶೀಘ್ರ ತರಬೇತಿ.
- **ಮಣ್ಣಿನ ಆರೋಗ್ಯ ರಕ್ಷಣೆಗೆ,** ಕೃಷಿ ಇಲಾಖೆಯಿಂದ, ಭೂ ಸಂಪನ್ಮೂಲ ಸಮೀಕ್ಷೆ.
- **ಸಾರ್ವಜನಿಕರ ಆರೋಗ್ಯ ಕಾಪಾಡಲು,** ಆಹಾರ ಇಲಾಖೆಯಿಂದ, ಆಹಾರ ಪದಾರ್ಥಗಳ ನಿಯಮಿತ ಪರೀಕ್ಷೆ.
- **ಭಾರತ ರತ್ನ, ಬಾಬಾಸಾಹೇಬ ಅಂಬೇಡ್ಕರ** ಅವರ, 69ನೇ ಪುಣ್ಯತಿಥಿ ಇಂದು; ದೇಶಾದ್ಯಂತ ಮಹಾ ಪರಿನಿರ್ವಾಣ ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**